ಅವಿಭಜಿತ ಮಹಾರಾಷ್ಟ್ರಕ್ಕೆ ಮೊದಲ ಸ್ಥಾನ ಪಡೆದವರು. ಕೆಲವೇ ವರ್ಷಗಳಲ್ಲಿ ಅಂದರೆ 1942ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಕಾಲೇಜಿನಿಂದ 'ಡಿಬಾರ್' ಆದವರು. ನಂತರ ಓದು ಮುಂದುವರಿಸಿ, ಭಾರತ ಸರ್ಕಾರದ ಆಡಿಟ್ ಮತ್ತು ಅಕೌಂಟ್ಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡಿ ನಿವೃತ್ತರಾದರು. ತಂದೆಯವರ ಆತ್ಮಹತ್ಯೆ, ಅಣ್ಣ ದಾಮೋದರ ಚಿತ್ತಾಲ ಮತ್ತು ಮೈದುನ ಉದಯನ ಅಕಾಲಿಕ ಅಪಘಾತ–ಮರಣಗಳು, ದಶಕಗಳ ಕಾಲ ತನ್ನನ್ನು ಪೀಡಿಸಿದ ಪಾರ್ಕಿನ್ಸನ್ ಕಾಯಿಲೆ ಮುಂತಾದ ಸಂಗತಿಗಳು ಅವರ ಯಶಸ್ವೀ ಜೀವನಕ್ಕೆ ನೋವು ಕೊಟ್ಟು, ದೃಷ್ಟಿಕೋನವನ್ನು ಬದಲಿಸಿದವು, ಮಾಗಿಸಿದವು. ಅವರು 'ಕಾಲದ ಕರೆ' (1948), 'ಮನುಕುಲದ ಹಾಡು' (1961), 'ಹರಿವ ನೀರಿದು' (1970) ಮತ್ತು 'ಸಂಪರ್ಕ' (1983) ಎಂಬ ನಾಲ್ಕು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕೊನೆಯ ಇಪ್ಪತ್ತೆರಡು ವರ್ಷಗಳಲ್ಲಿ ಅವರು ಬರೆದಿದ್ದು ಕೇವಲ ಇಪ್ಪತ್ತಮೂರು ಸಾರ್ಥಕ ಕವನಗಳು. ಚಿತ್ತಾಲರ ಮನೆಮಾತು ಕೊಂಕಣಿ. 'ಮನದ ಮಾತಿನ ಮಗಳು' ಎಂದು ಇವರೇ ಕರೆದ ಕವಿತೆಗಳ ಭಾಷೆ ಕನ್ನಡ. ಹನೇಹಳ್ಳಿಯ ಹಸಿರು, ಎಂ.ಎನ್. ರಾಯ್ ಅವರ ಪ್ರಭಾವದಿಂದ ಮೂಡಿದ ನವ ಮಾನವತಾವಾದ, ಭಯ ತಲ್ಲಣಗಳನ್ನು ಹುಟ್ಟಿಸಿದ ಮಹಾಯುದ್ಧಗಳು, ಸ್ವಾತಂತ್ರ್ಯೋತ್ತರ ರಾಜಕೀಯವನ್ನು ಕುರಿತ ಸಾತ್ವಿಕ ಕೋಪ ಮುಂತಾದವು ಇವರ ಜೊತೆಗಿದ್ದರೂ ಇವರನ್ನು ಆವರಿಸಿದ್ದು ಮನುಷ್ಯನ ಪಾಡನ್ನು, ನೋವನ್ನು ಕುರಿತ ಹರಿಗಡಿಯದ ಕುತೂಹಲ. ಅವರು ಸ್ವಾತಂತ್ರ್ಯ ಬಂದ ವರ್ಷದಲ್ಲಿಯೇ,

'ತಾಯಾಗಿ ಬರಲಿರುವ ಸ್ವಾತಂತ್ರ್ಯವಿದು ಬಂತೆ
ಹಣದ ಮಕ್ಕಳ ಮನೆಯ ಸೂಳೆಯಾಗಿ?
ಒಳಗೊಳಗೆ ಕುದಿದೆದ್ದ ಜೀವ ಕನಲುವುದು ಈ
ಮೋಸ ಮಾಟವ ಸುಡುವ ಹೋಳಿಯಾಗಿ!'

**(ಎಪ್ಪತ್ತೆರಡು ಕವಿತೆಗಳು, ಪುಟ 33 )**

'ನೆಲದ ಒಂದು ತುಂಡಿಗೇಕೊ 'ತಾಯಿ' ಎಂದು
ಸಾಯಬೇಕೊ
ನಡೆಸಬೇಕೊ ಮಣಿತವ?'

**(ಎಪ್ಪತ್ತೆರಡು ಕವಿತೆಗಳು, ಪುಟ 34)**

## ಗಂಗಾಧರ ಚಿತ್ತಾಲ

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಹನೇಹಳ್ಳಿಯಲ್ಲಿ ಜನಿಸಿ, ಮುಂಬಯಿಯಲ್ಲಿ ನೆಲೆಸಿ, ಕನ್ನಡದಲ್ಲಿ ಜೀವಿಸಿದ ಚಿತ್ತಾಲ ಸಹೋದರರು ಕನ್ನಡ ಕಥೆ–ಕಾವ್ಯಕ್ಕೆ ನೀಡಿದ ಕೊಡುಗೆ ಅನನ್ಯವಾದುದು. ಯಶವಂತ ಚಿತ್ತಾಲರು ಕನ್ನಡ ಕಥೆಗೆ ಹೊಸ ದಿಕ್ಕುಗಳನ್ನು ಕೂಡಿಸಿದರೆ, ಗಂಗಾಧರ ಚಿತ್ತಾಲರು ಕನ್ನಡ ಕಾವ್ಯಕ್ಕೆ ವಿಷಣ್ಣತೆಯನ್ನು ಕಸಿ ಮಾಡಿದ ಅಪ್ಪಟ ಕಸುಬುದಾರ. ಗಂಗಾಧರ ಚಿತ್ತಾಲರ ಪಾಲಿಗೆ, ಕಾವ್ಯವೆನ್ನುವುದು ದಿವ್ಯದ ಯಾತನೆ; ನೋವು ಪ್ರಕಟಗೊಳ್ಳುವ ಕ್ರಿಯೆ ಹೊಸ ಭರವಸೆಯ ಹುಡುಕಾಟಕ್ಕೆ ಒದಗಿಬರುವ ಮಾಂತ್ರಿಕ ಸಲಕರಣೆ. ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್, ವಾಷಿಂಗ್‌ಟನ್‌ನಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಫ್ ಆಡಿಟ್ಸ್, ಲಂಡನ್‌ನಲ್ಲಿ ಡೈರೆಕ್ಟರ್ ಆಫ್ ಆಡಿಟ್ಸ್ – ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿರುವ ಗಂಗಾಧರರು, ಕಾವ್ಯದ ಕಡುಮೋಹಿ. ವಿ.ಕೃ. ಗೋಕಾಕರು ಪ್ರಾರಂಭಿಸಿದ್ದ 'ವರುಣಕುಂಜ'ದ ಸದಸ್ಯರಲ್ಲೊಬ್ಬರು. 'ಕಾಲದ ಕರೆ', 'ಮನುಕುಲದ ಹಾಡು', 'ಹರಿವ ನೀರಿದು' ಹಾಗೂ 'ಸಂಪರ್ಕ' ಚಿತ್ತಾಲರ ಕವನಸಂಕಲನಗಳು. ಬೆಂಗಳೂರಿನ ಪ್ರಿಸಮ್ ಬುಕ್ಸ್ ಪ್ರಕಾಶನ ಪ್ರಕಟಿಸಿರುವ 'ಎಪ್ಪತ್ತೆರಡು ಕವಿತೆಗಳು' ಚಿತ್ತಾಲರ ಒಟ್ಟು ಕಾವ್ಯ ಹಾಗೂ ಆ ಕಾವ್ಯಕ್ಕೆ ಬಂದಿರುವ ವಿಮರ್ಶಾ ಬರಹಗಳನ್ನು ಒಳಗೊಂಡ ಸಂಕಲನ. ಪಾರ್ಕಿನ್‌ಸನ್ ಕಾಯಿಲೆಯ ಬಾಧೆಗೊಳಗಾಗಿ, ಆ ಸಂಕಟದಲ್ಲೇ ತೀರಿಹೋದಾಗ ಅವರಿಗೆ ಅರವತ್ತಮೂರು ವರ್ಷ. 2023ರ ನವೆಂಬರ್ 12ಕ್ಕೆ ಅವರು ಜನಿಸಿ ನೂರು ವರ್ಷಗಳಾದವು.